## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.

## ಸಿ.ಸಿ.ನಂ. 1795/2021

| | | |
|---|---|---|
| ಸಾಕ್ಷಿದಾರರ ಹೆಸರು | : | ಮೋಹನ ಹೆಚ್.ಎಸ್. |
| ತಂದೆಯ ಹೆಸರು | : | ಶಿವಲಿಂಗೇಗೌಡ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಪೋಲೀಸ್ ಪೇದೆ, ಹೆಚ್.ಡಿ. ಕೋಟೆ ಪೋಲೀಸ್ ಠಾಣೆ |
| ವಾಸಸ್ಥಳ | : | ಹೆಚ್.ಡಿ. ಕೋಟೆ ಟೌನ್. |

**ಸಾಕ್ಷಿಯನ್ನು ದಿನಾಂಕಃ 14.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ನಾನು ದಿನಾಂಕಃ 01.09.2016 ರಿಂದ ದಿನಾಂಕಃ 01.08.2024 ರವರೆಗೆ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿ ಮತ್ತೆ ಪಿರಿಯಾಪಟ್ಟಣ ಪೋಲೀಸ್ ಠಾಣೆಗೆ ವರ್ಗಾವಣೆಯಾಗಿ ಮತ್ತೆ ದಿನಾಂಕಃ 09.12.2024 ರಿಂದ ಇಲ್ಲಿಯವರೆಗೆ ಹೆಚ್.ಡಿ.ಕೋಟೆ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 07.11.2020 ರಂದು ಬಾತ್ಮೀದಾರರ ಮಾಹಿತಿ ಮೇರೆಗೆ ಹಳ್ಳದಮನುಗನಹಳ್ಳಿ ಗ್ರಾಮದ ಬಸ್ ನಿಲ್ದಾಣದಲ್ಲಿ ಜಯಲಿಂಗ ಎಂಬ ವ್ಯಕ್ತಿ ಆಕ್ರಮವಾಗಿ ಸಾರ್ವಜನಿಕರಿಗೆ ಮದ್ಯವನ್ನು ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟಿರುವ ಬಗ್ಗೆ ಚಾಸಾ–1

ರವರು ನನ್ನನ್ನು ಮತ್ತು ನಮ್ಮ ಠಾಣಾ ಸಿಬ್ಬಂಧಿಗಳಾದ ಚಾಸಾ-4, ಚಾಸಾ-6 ರಿಂದ ಚಾಸಾ-8 ರವರನ್ನು ಕರೆಸಿ ಹಳ್ಳದಮನುಗನಹಳ್ಳಿ ಗೇಟ್ ಬಳಿ ಬರುವಂತೆ ಹೇಳಿದ್ದು, ಪಂಚರಾದ ಚಾಸಾ-2 - ಅಕ್ಷಯ್ ಮತ್ತು ಚಾಸಾ-3 -ರಾಜೇಶರವರನ್ನು ಹೆಚ್.ಡಿ. ಕೋಟೆಯಿಂದ ಕರೆದುಕೊಂಡು ಹೋಗಿರುತ್ತೇವೆ. ನಂತರ ನಾವುಗಳು ಹಳ್ಳದಮನುಗನಹಳ್ಳಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಇರುವ ಜಯಲಿಂಗ ಎಂಬ ವ್ಯಕ್ತಿಯನ್ನು ಹಿಡಿದು ಪರಿಶೀಲಿಸಿದಾಗ ಆತ ಅಕ್ರಮವಾಗಿ ಸಾರ್ವಜನಿಕರಿಗೆ ಮಧ್ಯವನ್ನು ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟಿರುವ ಬಗ್ಗೆ ನಮಗೆ ಗೊತ್ತಾಗಿದ್ದು ನಂತರ ಆತನನ್ನು ನಮ್ಮ ವಶಕ್ಕೆ ಪಡೆದು, ಮಧ್ಯದ ಪೌಚ್ ಗಳನ್ನು ಅಮಾನತ್ತುಪಡಿಸಿಕೊಂಡು ವಾಪಸ್ ಹೆಚ್.ಡಿ. ಕೋಟೆಗೆ ಬರುವಾಗ ಮಧ್ಯಾಹ್ನ 03.30 ಗಂಟೆ ಸಮಯಕ್ಕೆ ಕ್ಯಾತನಹಳ್ಳಿ ಗೇಟ್ ಬಳಿ ಚಾಸಾ-1 ರವರಿಗೆ ಬಾತ್ಮೀದಾರರು ಸಿಕ್ಕಿ ಗಂಗಡಹೊಸಳ್ಳಿಯಲ್ಲಿರುವ ಒಂದು ಪೆಟ್ಟಿಗೆ ಅಂಗಡಿಯಲ್ಲಿ ಅಕ್ರಮವಾಗಿ ಮಧ್ಯದ ಪ್ಯಾಕೆಟ್ ಗಳನ್ನು ಮಾರಾಟ ಮಾಡುವುದಾಗಿ ಮಾಹಿತಿ ನೀಡಿದಾಗ ಚಾಸಾ-1 ರವರು ಸಿಬ್ಬಂಧಿಗಳಾದ ನಮ್ಮನ್ನು ಮತ್ತು ಪಂಚರುದಾರರನ್ನು ಗಂಗಡಹೊಸಳ್ಳಿ ಗ್ರಾಮದಲ್ಲಿ ರಸ್ತೆಯ ಫುಟ್ ಪಾತ್ ನಲ್ಲಿರುವ ನಂಜುಂಡೇಗೌಡರವರಿಗೆ ಸೇರಿದ ಅಂಗಡಿಯ ಮೇಲೆ ದಾಳಿ ಮಾ ಮಧ್ಯದ ಪ್ಯಾಕೆಟ್ ಗಳನ್ನು ಅಮಾನತ್ತುಪಡಿಸಿಕೊಂಡು ನಂತರ ಸಂಜೆ 05.00 ಗಂಟೆಗೆ ಆರೋಪಿ ಶೆಟ್ಟಿಗೌಡ ಎಂಬುವವರ ಅಂಗಡಿ ಮೇಲೆ ದಾಳಿ ಮಾಡಿ ಪರಿಶೀಲಿಸಿ ನೋಡಿದಾಗ ಅಂಗಡಿಯಲ್ಲಿ 180 ಎಂ.ಎಲ್. ನ 04 ಓಲ್ಡ್ ಟಾವರಿನ್ ವಿಸ್ಕಿಯ ಪೌಚ್ ಗಳು ಮತ್ತು 90 ಎಂ.ಎಲ್. ನ 30 ಒರಿಜಿನಲ್ ಛಾಯ್ಸ್ ವಿಸ್ಕಿಯ ಪೌಚ್ ಗಳು ಇರುವುದು ಕಂಡುಬಂದಿರುತ್ತದೆ.

ಆರೋಪಿಯು ಸಹ ಅಂಗಡಿಯಲ್ಲಿ ಇದ್ದನು. ನಂತರ ಆರೋಪಿಗೆ ಚಾಸಾ-1 ರವರು ಪರವಾನಗಿ ಕೇಳಲಾಗಿ ಆತ ಇಲ್ಲ ಎಂದು ತಿಳಿಸಿದ್ದರಿಂದ ಆತನ ವಶದಲ್ಲಿದ್ದ 34 ಮಧ್ಯದ ಪೌಚ್ ಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ **A** ಎಂಬ ಅಕ್ಷರದಿಂದ ಸೀಲ್ ಮಾಡಿ ಸಂಜೆ 05.00-06.00 ಗಂಟೆಯವರೆಗೆ ಪಂಚರುದಾರರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತೇವೆ. ನಂತರ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಹಿಂದಿರುಗಿ ನಂತರ ಚಾಸಾ-1 ರವರು ಆರೋಪಿಯ ವಿರುದ್ದ ಪ್ರಕರಣ ದಾಖಲು ಮಾಡಿರುತ್ತಾರೆ. ನಾನು ಈ ಬಗ್ಗೆ ಚಾಸಾ-1 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ನಿ.ಪಿ.-1 ಅನ್ನು ತೋರಿಸಲಾಗಿ ಸಾಕ್ಷಿ ಅದು ಮೇಲೇ ಹೇಳಿದಂತೆ ಕೃತ್ಯ ಸ್ಥಳದಲ್ಲಿ ಜರುಗಿಸಿದ ಮಹಜರ್ ಎಂದು ಗುರುತಿಸಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿ.ಪಿ.-1 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-1(ಡಿ)** ಎಂದು ಗುರುತಿಸಲಾಯಿತು. ಘಟನಾ ಸಂಬಂಧ ನಾನು ಚಾಸಾ-1 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಮುದ್ದೆಮಾಲು-1 ರಿಂದ ಮುದ್ದೆಮಾಲು-35 ಅನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಜಿ.ಎನ್.ಎನ್./ ಶ್ರೀ. ಹೆಚ್.ಎಸ್.ಡಿ. ವಕೀಲರಿಂದಃ**

ಚಾಸಾ-1 ರವರಿಗೆ ಬಾತ್ಮೀ ಬಂದಾಗ ನಾನು ಠಾಣಾ ಕರ್ತವ್ಯದಲ್ಲಿದ್ದೆ. ನಾವು ಹಾಗು ಪಂಚರು ಖಾಸಗಿ ವಿಂಗರ್ ವಾಹನದಲ್ಲಿ ದಾಳಿ ಮಾಡಲು ಹೋಗಿರುತ್ತೇವೆ. ಹಳ್ಳದಮನುಗನಹಳ್ಳಿ ಗ್ರಾಮಕ್ಕೆ ಹೋಗಬೇಕಾದರೆ ಗಂಗಡಹೊಸಹಳ್ಳಿ ಮತ್ತು ಕ್ಯಾತನಹಳ್ಳಿ

ಗ್ರಾಮಗಳನ್ನು ಹಾದು ಹೋಗಬೇಕಾಗುತ್ತದೆಂದರೆ ಸರಿ. ಹಳ್ಳದಮನುಗನಹಳ್ಳಿ ಮತ್ತು ಕ್ಯಾತನಹಳ್ಳಿ ಗ್ರಾಮಕ್ಕೆ ಸುಮಾರು 06-07 ಕಿ.ಮೀ. ಅಂತರವಿದೆ. ಹಳ್ಳದಮನುಗನಹಳ್ಳಿ ಗ್ರಾಮದಲ್ಲಿ 01 ಅಂಗಡಿಯನ್ನು ತಪಾಸಣೆ ಮಾಡಿರುತ್ತೇವೆ. ಅಲ್ಲಿ 01 ಪೆಟ್ಟಿ ಅಂಗಡಿ ಇರುತ್ತದೆ. ಆರೋಪಿಯ ಇದ್ದರು ಎಂದು ಹೇಳಲಾದ ಅಂಗಡಿ ಯಾರ ಹೆಸರಿನಲ್ಲಿರುತ್ತದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಆ ರೀತಿ ದಾಖಲೆ ಪರಿಶೀಲಿಸಿರುವುದಿಲ್ಲವೆಂದು ನುಡಿಯುತ್ತಾರೆ. ನಾವು ಯಾವುದೇ ಕೃತ್ಯ ನಡೆಯಲಾಯಿತೆಂದು ಹೇಳಿದ ಸ್ಥಳಕ್ಕೆ ಹೋಗಿ ದಾಳಿ ಮಾಡಿರುವುದಿಲ್ಲ ಬದಲಾಗಿ ಚಾಸಾ-1 ರವರು ಠಾಣಾ ಮೇಲಾಧಿಕಾರಿಯಾಗಿರುವುದರಿಂದ ಠಾಣಾ ಅಂಕಿ-ಅಂಶ ತೋರಿಸಲು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆಂದರೆ ಸರಿಯಲ್ಲ. ಘಟನೆ ನಡೆಯಿತು ಎಂದು ಹೇಳಿದ ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಮತ್ತು ಯಾವುದೇ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು-1 ರಿಂದ ಮುದ್ದೆಮಾಲು-35 ರ ಮೇಲೆ ನನ್ನ ಸಹಿ ಇರುವ ಚೀಟಿ ಅಂಟಿಸಿರುವುದಿಲ್ಲ. ಆರೋಪಿಗು, ಮುದ್ದೆಮಾಲುಗಳಿಗು ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**